ಕನ್ನಡ ಪೋಸ್ಟ್
KANNADA POST
ಸಂಪಾದಕ : ಮಂಜು ಬನವಾಸೆ
ಇದು ಸುದ್ದಿ ವಿಲಾಸ
ಕನ್ನಡ ದಿನಪತ್ರಿಕೆ
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.02 | Issue. 254 | Pages. 2 | Date: 22-09-2026, TUESDAY RNI NO: KARKAN/2024/89601 Kannada Daily
ಸಂಪುಟ : 02 - ಸಂಚಿಕೆ : 254 - ಪುಟಗಳು : 2 22-09-2026 ಮಂಗಳವಾರ Ph: 8762954248 ದರ : ₹1

# ಜನ-ಜಾನುವಾರುಗಳಿಗೆ ನೀರು ಕೊಡಿ

## ಒಂದು ತಾಲೂಕಿಗೆ ಕನಿಷ್ಠ ನಾಲ್ಕೈದು ಕೋಟಿ ನೀಡುವಂತೆ ರೇವಣ್ಣ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೇಮಾವತಿ ಜಲಾಶಯಗಳಿಂದ ನಾಲೆಗಳಿಗೆ ನೀರು ಬಿಟ್ಟಿದ್ದರೂ ಕೆರೆಕಟ್ಟೆಗಳು ಭರ್ತಿಯಾಗಿಲ್ಲ. ಎಷ್ಟೋ ಏತ ನೀರಾವರಿ ಯೋಜನೆಗಳ ಯಂತ್ರಗಳು ಕೆಟ್ಟು ಹೋಗಿದ್ದು, ಅವುಗಳನ್ನು ದುರಸ್ತಿ ಮಾಡದ ಕಾರಣ, ಅವೆಲ್ಲಮೂ ನಿಷ್ಪ್ರಯೋಜಕವಾಗಿವೆ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ದೂರಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದರಿಂದ ಆಯಾಯ ಯೋಜನೆ ವ್ಯಾಪ್ತಿಯ ನೂರಾರು ಕೆರೆಗಳಿಗೆ ಹೋಗುತ್ತಿಲ್ಲ. ಸರ್ಕಾರ ಕೃಷಿಗೆ ನೀರು ಕೊಡುವುದು ಬೇಡ, ಕನಿಷ್ಠ ಜನ-ಜಾನುವಾರುಗಳಿಗೆ ಕುಡಿಯಲು ನೀರು ಕೊಡಬಾರದೇ ಎಂದು ಪ್ರಶ್ನಿಸಿದರು.

ತಟ್ಟೆಕೆರೆ ಏತ ನೀರಾವರಿ ಕೆಟ್ಟು ಹೋಗಿದೆ, ಕಾಮಸಮುದ್ರ ಯೋಜನೆ ಮುಗಿಯಲು ಹಣ ಕೊಡುತ್ತಿಲ್ಲ. ಮಲ್ಲಪ್ಪನಹಳ್ಳಿ ನಾಲೆಯಲ್ಲಿ ಗಿಡಗಂಟೆ, ಮರಗಿಡ ಬೆಳೆದಿದ್ದು, ಸ್ವಚ್ಛ ಮಾಡಿಲ್ಲ. ನಾನೇ ಹಣ ಹಾಕಿ ರಿಪೇರಿ ಕ್ಲೀನ್ ಮಾಡಿಸುತ್ತಿದ್ದೇನೆ ಎಂದರು.

ಚಾಕೇನಹಳ್ಳಿ ಲಿಫ್ಟ್ ಇರಿಗೇಷನ್ ಯೋಜನೆಗೆ ಭೂಸ್ವಾಧೀನ ಮಾಡಿದ್ದರೂ ರೈತರಿಗೆ ಹಣ ನೀಡಿಲ್ಲ. ಅನ್ನದಾತರನ್ನು ಅಲೆದಾಡಿಸುತ್ತಿದ್ದಾರೆ. ತಾವು ರಿಪೇರಿ ಮಾಡಿಸಿದ ನಂತರ ಚಾಕೇನಹಳ್ಳಿ ಕಟ್ಟೆಗೆ ನೀರು ಹೋಗುತ್ತಿದೆ ಎಂದರು.

ದುದ್ದ-ಶಾಂತಿಗ್ರಾಮ ಹೋಬಳಿಗೆ ಕುಡಿಯುವ ನೀರು



ಮತ್ತು 160 ಕೆರೆಗಳಿಗೆ ನೀರು ತುಂಬಿಸುವ ಕೊಡುವ ಯೋಜನೆಗೆ ಭೂಮಿ ನೀಡಿದ್ದರೂ ಸಾಕಾರವಾಗುತ್ತಿಲ್ಲ. ಅಧಿಕಾರಿಗಳು ದಿನಗಳ ಭರವಸೆ ನೀಡುತ್ತಿದ್ದಾರೆ ಅಷ್ಟೆ ಎಂದರು.

ಕಾಚೇನಹಳ್ಳಿ ಏತ ನೀರಾವರಿ ಮೂರು ಹಂತಗಳ ಕಾಮಗಾರಿ ಕುಮಾರಸ್ವಾಮಿ ಅವರ ಸರ್ಕಾರದ ಅವಧಿಯಲ್ಲಿ ಆದವು. ಅಲ್ಲೂ ನೀರು ಹೋಗ್ತಾ ಇಲ್ಲ ಎಂದು ಆರೋಪಿಸಿದರು.

ಯಗಚಿ ನಾಲೆಯ ಕೇವಲ 5 ಕಿಮೀ ಕಾಮಗಾರಿ ಕಳೆದ 3 ವರ್ಷದಿಂದ ನೆನೆಗುದಿಗೆ ಬಿದ್ದಿದೆ. ಇದರಿಂದ 12 ಸಾವಿರ ಎಕರೆ ಪ್ರದೇಶದಿಂದ ನೀರಾವರಿ ಸೌಲಭ್ಯ ಕಳೆದುಕೊಂಡಿವೆ. ಹೇಮಾವತಿ ಅಚ್ಚುಕಟ್ಟು ಭಾಗದ ಕೆರೆ-ಕಟ್ಟೆ ತುಂಬದೇ ಹೋದರೆ ಹಾಲಿ ಹರಿದಿರುವ 17 ಟಿಎಂಸಿ ನೀರು ಎಲ್ಲಿ ಹೋಯ್ತು ಎಂದು ಕೇಳಿದರು.

ಸರ್ಕಾರ ಮೊದಲು ನಾಲೆಗಳ ಶಿಲ್ಟ್ ತೆಗೆಸಲಿ, ಮೊದಲು ಕೆರೆಗಳಿಗೆ ನೀರು ತುಂಬಿಸಲಿ, ಕನಿಷ್ಠ ನಮಗೆ ಕುಡಿಯಲು ನೀರು ಕೊಡಿ ಎಂದು ಆಗ್ರಹಿಸಿದರು.

ಜಿಲ್ಲೆಯ 7 ತಾಲೂಕುಗಳನ್ನು ಬರಪೀಡಿತ ಎಂದು ಸರ್ಕಾರ ಘೋಷಣೆ ಮಾಡಿದೆ. ಆದರೆ ಈವರೆಗೂ ನಯಾಪೈಸೆ ಪರಿಹಾರ ಹಣ ನೀಡಿಲ್ಲ. ಕನಿಷ್ಠ ಒಂದು ತಾಲೂಕಿಗೆ 4-5 ಕೋಟಿ ನೆರವು ಕೊಡಲಿ, ಜನ-ಜಾನುವಾರು ಉಳಿಸಲಿ ಎಂದು ಒತ್ತಾಯಿಸಿದರು.

ಸಿಎಂ ಅವರು ಡಿಸಿ ಅವರಿಗೆ ಕೆಲಸ ಮಾಡಿ ಎಂದು ಧೈರ್ಯ ತುಂಬಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಯಾರು ಕಿರುಕುಳ ನೀಡುತ್ತಿದ್ದಾರೋ ಗೊತ್ತಿಲ್ಲ. ಡಿಸಿ ಕಚೇರಿಯಿಂದಲೇ ಕೆಲವರು ಕುಮ್ಮಕ್ಕು ಕೊಡುತ್ತಿದ್ದಾರೆ.

ನಾನು ಯಾರಿಗೂ ಧಮ್ಕಿ ಹಾಕಿಲ್ಲ. ಕಾನೂನು ರೀತಿ ಕೆಲಸ ಮಾಡಿಕೊಡಿ ಎಂದು ಅಧಿಕಾರಿಗಳನ್ನು ಕೇಳುತ್ತೇನೆ. ಮಾಡಿಕೊಡದಿದ್ದರೆ ಸರ್ಕಾರದ ಬಳಿ ಹೋಗುತ್ತೇವೆ. ಅಲ್ಲೂ ಏನೂ ಆಗಲಿಲ್ಲ ಎಂದರೆ ನ್ಯಾಯಾಂಗದ ಬಳಿ ಹೋಗುತ್ತೇವೆ ಎಂದರು. ನಾನು ಕಿರುಕುಳ ಕೊಟ್ಟು ಹೊಲ, ಮನೆ ಬರೆಸಿಕೊಳ್ಳಬೇಕಾ, ಡಿಸಿ ಅವರಿಗೆ ಕಿರುಕುಳ ನೀಡಿದ್ದರೆ ಅಂಥವರ ಹೆಸರು ಹೇಳಲಿ ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು, ಉಪಾಧ್ಯಕ್ಷ ರಾಂಪುರ ಶೇಖರಪ್ಪ, ನಿರ್ದೇಶಕ ಹೊಸೂರು ಗಂಗಾಧರ್, ಜನತಾಬಜಾರ್ ಅಧ್ಯಕ್ಷ ಗಂಡಸಿ ಮಂಜಣ್ಣ, ಅರಸೀಕೆರೆ ತಾ.ಜೆಡಿಎಸ್ ಅಧ್ಯಕ್ಷ ಚಂದ್ರಶೇಖರ್ ಇದ್ದರು.

> ಲಂಚದ ವಿಚಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹೇಳಿರುವುದರಲ್ಲಿ ಸತ್ಯ ಇದೆ. ಇಂದು ಎಲ್ಲ ಇಲಾಖೆಯಲ್ಲಿ ಲಂಚ ಕೊಡದಿದ್ದರೆ ಏನೂ ಆಗಲ್ಲ, ಹಾಗಾಗಿ ಕೈಲಾದಷ್ಟು ಕೊಟ್ಟು ಕೆಲಸ ಮಾಡಿಸಿಕೊಳ್ಳಿ, ಆ ಮೂಲಕ ಉಸ್ತುವಾರಿ ಸಚಿವರ ಆದೇಶ ಪಾಲಿಸಿ. ರಾಜ್ಯ ಸರ್ಕಾರ ದಿವಾಳಿ ಆಗಿದ್ರೆ, ಬರ ಪರಿಹಾರಕ್ಕಾಗಿ ನೆಲಮಂಗಲ ಬಳಿ ಇರುವ ತಮ್ಮ ಮಕ್ಕಳಿಗೆ ಸೇರಿದ ಆಸ್ತಿ ಕೊಡಲು ಸಿದ್ಧನಿದ್ದೇನೆ. ನನಗೆ ರಾಜ್ಯದ ಜನ ಉಳೀಬೇಕು ಅಷ್ಟೇ.
>
> **- ಮಾಜಿ ಸಚಿವ**

### ವಿರೋಧಿ ನಿರ್ಣಯ ಮಾಡಿ

ನಮ್ಮ ಜಿಲ್ಲೆ ಸೇರಿದಂತೆ ಮಲೆನಾಡು ಭಾಗದಲ್ಲಿ ಕಸ್ತೂರಿ ರಂಗನ್ ವರದಿ ಜಾರಿಗೆ ನಮ್ಮ ವಿರೋಧವಿದೆ ಎಂದ ರೇವಣ್ಣ, ನಮ್ಮ ಜನರ ಉಳಿಸಲು ನಮ್ಮ ಬೆಂಬಲ ಇದೆ ಎಂದರು. ಈ ವಿಚಾರದಲ್ಲಿ ಚರ್ಚೆ ಮಾಡುವ ಬದಲು ವರದಿ ಜಾರಿ ವಿರೋಧಿಸಿ ಒಂದು ಸಾಲಿನ ನಿರ್ಣಯವನ್ನು ಸರ್ಕಾರ ಕೈಗೊಳ್ಳಲಿ. ಸರ್ವಪಕ್ಷ ನಿಯೋಗ ತೆರಳಿದರೂ ನಾವು ಹೋಗುತ್ತೇವೆ. ಇದರಲ್ಲಿ ರಾಜಕೀಯ ಬೇಡ, ನಾವು ನಮ್ಮ ಮಿತ್ರ ಬಿಜೆಪಿ ಎಲ್ಲರೂ ವರದಿ ವಿರುದ್ಧ ಇದ್ದೇವೆ ಎಂದರು.

## ಕೆಎಂಶಿ ವಿರುದ್ಧ ರಾಜ್ಯಪಾಲರಿಗೆ ದೂರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಸಕಲೇಶಪುರ ಪ್ರಜಾಸೇವೆ ಆಂದೋಲನ ಸಭೆಯಲ್ಲಿ ಅಧಿಕಾರಿಗಳಿಗೆ ಗೌರವಯುತವಾಗಿ ಕೊಡೋದು ನಿಮ್ಮ ಧರ್ಮ ಎಂಬ ಸಚಿವ ಕೆ.ಎಂ.ಶಿವಲಿಂಗೇಗೌಡರ ವಿವಾದಾತ್ಮಕ ಹೇಳಿಕೆ ವಿಚಾರವೀಗ ರಾಜ್ಯಪಾಲರ ಅಂಗಳ ತಲುಪಿದೆ.

ಭ್ರಷ್ಟಾಚಾರಕ್ಕೆ ಉತ್ತೇಜನದ ಆರೋಪದ ಹಿನ್ನೆಲೆ ಅಬಕಾರಿ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಶಿವಲಿಂಗೇಗೌಡ ವಿರುದ್ಧ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಗವರ್ನರ್‌ಗೆ ಇಮೇಲ್ ಮೂಲಕ ದೂರು ಸಲ್ಲಿಸಿದ್ದಾರೆ. ಸಚಿವರ ಈ ಹೇಳಿಕೆಯು ಭ್ರಷ್ಟಾಚಾರಕ್ಕೆ ಪ್ರೋತ್ಸಾಹಿಸಿದಂತಿದೆ. ಸಂವಿಧಾನದ ಪರಿಚ್ಛೇದ 14 (ಸಮಾನತೆಯ ಹಕ್ಕು) ಹಾಗೂ ಭ್ರಷ್ಟಾಚಾರ ತಡೆ ಕಾಯ್ದೆ 1988ರ ಸೆಕ್ಷನ್ 7, 8 ಮತ್ತು 12ರ (ಲಂಚ ಸ್ವೀಕಾರ, ನೀಡಿಕೆ ಹಾಗೂ ಪ್ರಚೋದನೆ) ಅಡಿಯಲ್ಲಿ ಇದು ಗಂಭೀರ ಪರಿಶೀಲನೆಗೆ ಒಳಪಡಬೇಕು ಎಂದವರು ಆಗ್ರಹಿಸಿದ್ದಾರೆ. ಸಚಿವ ಸ್ಥಾನದಿಂದ ಶಿವಲಿಂಗೇಗೌಡರನ್ನು ವಜಾಗೊಳಿಸುವಂತೆಯೂ ಮನವಿ ಮಾಡಿದ್ದಾರೆ.

ಶಿವಲಿಂಗೇಗೌಡ ಹೇಳಿದ್ದೇನು:



ಇನ್ನು ತಮ್ಮ ವಿರುದ್ಧ ರಾಜ್ಯಪಾಲರಿಗೆ ದೂರು ಸಂಬಂಧ ಪ್ರತಿಕ್ರಿಸಿರುವ ಸಚಿವ ಶಿವಲಿಂಗೇಗೌಡ, ನಾನೇನು ನೇರವಾಗಿ ಹಣ ಕೋಡೋಕೆ ಹೇಳಿದ್ನಾ, ಅಧಿಕಾರಿಗಳ ಜೊತೆ ಗೌರವ ಯುತವಾಗಿ ನಡೆದುಕೊಳ್ಳಿ ಎಂದಿದ್ದೇನೆ ಅಷ್ಟೇ. ಯಾಕೆ ಇದನ್ನ ದೊಡ್ಡ ವಿಚಾರ ಮಾಡುತ್ತಿದ್ದಾರೆ, ರೈತರ ಸಮಸ್ಯೆ ಬಗ್ಗೆ ಯಾರು ಕೇಳ್ತಾರೆ, ಇದರ ಬಗ್ಗೆ ಯಾರು ಬರೆಯಲ್ಲ, ರಾಜ್ಯ ಪಾಲರಿಗೆ ಹೇಳ್ತಾರಾ, ಅಲ್ಲಿ ಅಧಿಕಾರಿಗಳು ಮತ್ತು ರೈತರ ನಡುವೆ ಘರ್ಷಣೆ ನಡೀತಾ ಇತ್ತು. ನಮ್ಮಮೇಲೆ ಗಲಾಟೆ ಮಾಡುತ್ತಾರೆ ಅಂತ ಅಧಿಕಾರಿ ಹೇಳಿದ್ದ. ಹೀಗಾಗಿ ನಿಮ್ಮ ಕೆಲಸ ಆದ್ಮೇಲೆ ಸರಿಯಾಗಿ ಮಾತಾಡೋದು, ಸರಿಯಾಗಿ ಗೌರವ ನೀಡೋದು ಮಾಡಿ ಎಂದಿರೋದಾಗಿ ಅವರು ಸ್ಪಷ್ಟಪಡಿಸಿದ್ದಾರೆ.

ವಿವಾದ ಏನು: ಸಕಲೇಶಪುರ ತಹಸಿಲ್ದಾರ್ ಕಚೇರಿ ಆವರಣದಲ್ಲಿ ನಡೆದ ಪ್ರಜಾಸೇವೆ ಆಂದೋಲನ ಸಭೆಯಲ್ಲಿ ಸಚಿವ ಶಿವಲಿಂಗೇಗೌಡರು, ಕೆಲಸ ಮಾಡಿಕೊಟ್ಟ ಅಧಿಕಾರಿಗಳಿಗೆ ಗೌರವಯುತವಾಗಿ ಕೊಡೋದು ನಿಮ್ಮ ಧರ್ಮ. ಆದರೆ ಬಲತ್ಕಾರವಾಗಿ ದುಡ್ಡು ಕಿತ್ತುಕೊಳ್ಳೋದು ಸರಿಯಲ್ಲ ಎಂದು ಹೇಳಿದ್ದರು. ಸಚಿವರ ಮಾತಿಗೆ ಸ್ಥಳದಲ್ಲಿದ್ದ ಜನರು ಕೆರಳಿದ್ದು, ಗೌರವಯುತವಾಗಿ ಯಾಕೆ ಕೊಡಬೇಕು, ಅವರಿಗೆ ಸಂಬಳ ಕೊಡಲ್ವಾ, ಎಂದು ಪ್ರಶ್ನಿಸಿದ್ದರು. ಈ ವಿಡಿಯೋ ಭಾರಿ ವೈರಲ್ ಆಗಿದ್ದು, ಸಚಿವರ ಹೇಳಿಕೆ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗೆ ಗ್ರಾಸವಾಗಿತ್ತು.

## ಟಿ.ಎನ್. ಸೀತಾರಾಂ ಅವರ 'ಮುಂದಿನ ಅಧ್ಯಾಯ' ವೆಬ್ ಸರಣಿ ಲೋಕಾರ್ಪಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಖ್ಯಾತ ನಟ, ನಿರ್ದೇಶಕ ಹಾಗೂ ಸಾಹಿತಿ ಟಿ.ಎನ್. ಸೀತಾರಾಂ ಅವರ ಸಾರಥ್ಯದ ಮೊದಲ ಯೂಟ್ಯೂಬ್ ವೆಬ್ ಸರಣಿ 'ಮುಂದಿನ ಅಧ್ಯಾಯ' ನಗರದ ಗಾಂಧಿ ಭವನದಲ್ಲಿ ಇತ್ತೀಚೆಗೆ ನೂರಾರು ಅಭಿಮಾನಿಗಳ ಸಮ್ಮುಖದಲ್ಲಿ ಲೋಕಾರ್ಪಣೆಗೊಂಡಿತು.

ಸರಣಿಯ ಕುರಿತು ಮಾತನಾಡಿದ ಟಿ.ಎನ್. ಸೀತಾರಾಂ, 'ಮಾಯಾಮೃಗ' ಸೇರಿದಂತೆ ತಾವು ನಿರ್ದೇಶಿಸಿದ ಧಾರಾವಾಹಿಗಳ ಪ್ರಮುಖ ಪಾತ್ರಗಳಾದ ಜಾನಕಿ, ಮಾಧವಿ ಪಟೇಲ್, ಶಾಸ್ತ್ರಿಗಳು ಹಾಗೂ ಶಂಕರಮೂರ್ತಿ ಅವರ ಇಂದಿನ ಬದುಕು ಹೇಗಿರಬಹುದು ಎಂಬ ಕುತೂಹಲದ ಹಿನ್ನೆಲೆಯಲ್ಲಿ 'ಮುಂದಿನ ಅಧ್ಯಾಯ' ರೂಪಿಸಲಾಗಿದೆ ಎಂದು ತಿಳಿಸಿದರು.

ಮೊದಲ ಹಂತದಲ್ಲಿ 'ಮಗಳು ಜಾನಕಿ' ಪಾತ್ರದ ಮುಂದಿನ ಕಥೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಒಟ್ಟು 16 ಎಪಿಸೋಡ್‌ಗಳ ಮೂರು ಸೀಸನ್‌ಗಳಲ್ಲಿ ಸರಣಿ ಮೂಡಿಬರಲಿದೆ. ಸೆ.22ರಿಂದ ಪ್ರತಿದಿನ ಸಂಜೆ 8ರಿಂದ 8.30ರವರೆಗೆ ಭೂಮಿಕಾ ಟಾಕೀಸ್ ಯೂಟ್ಯೂಬ್ ಚಾನೆಲ್‌ನಲ್ಲಿ ಎಪಿಸೋಡ್



ಪ್ರಸಾರವಾಗಲಿದೆ. ಪ್ರತಿ ಎಪಿಸೋಡ್ 24 ಗಂಟೆಗಳ ಕಾಲ ಮಾತ್ರ ವೀಕ್ಷಣೆಗೆ ಲಭ್ಯವಿರಲಿದೆ ಎಂದು ಅವರು ಹೇಳಿದರು.

ಮುಖ್ಯವಾಹಿನಿಯ ಮನರಂಜನಾ ವಾಹಿನಿಗಳು ಹೆಚ್ಚಾಗಿ ಶ್ರೀಮಂತ ಕುಟುಂಬಗಳ ನಡುವಿನ ಸಂಘರ್ಷ ಹಾಗೂ ವ್ಯವಹಾರಕೇಂದ್ರಿತ ಕಥೆಗಳಿಗೆ ಆದ್ಯತೆ ನೀಡುತ್ತಿವೆ. ಆದರೆ ತಾವು ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ಬದುಕನ್ನು ಕಂಡು ಬೆಳೆದಿರುವುದರಿಂದ ಆ ವರ್ಗದ ಜನರ ಜೀವನಾನುಭವಗಳನ್ನು ಆಧರಿಸಿದ ಕಥೆಗಳನ್ನು ಹೇಳಲು ಯೂಟ್ಯೂಬ್ ವೇದಿಕೆಯನ್ನು ಆಯ್ಕೆ ಮಾಡಿಕೊಂಡಿರುವುದಾಗಿ ಸೀತಾರಾಂ ಹೇಳಿದರು.



ಕಾರ್ಯಕ್ರಮವನ್ನು ಸ್ಕಾಲರ್ಸ್ ಇಂಟರ್‌ನ್ಯಾಷನಲ್ ಶಾಲೆಯ ಆಡಳಿತಾಧಿಕಾರಿ ಡಾ. ಎಚ್.ಎನ್. ಚಂದ್ರಶೇಖರ್ ಉದ್ಘಾಟಿಸಿದರು. ನಿರ್ಮಾಣ ಸಂಸ್ಥೆಯ ರಾಮಚಂದ್ರ ದೇಗೂರು, ಕಲಾವಿದರಾದ ಹನುಮಂತೇಗೌಡ, ಸುಧಾ ಬೆಳವಾಡಿ, ಅರ್ಜುನ್ ಸಾಮರ್ಥ್ಯ, ಚಂದನ್ ಶಂಕರ್ ಹಾಗೂ ಡಿ.ಸಿ. ಕೃಷ್ಣಮೂರ್ತಿ ಮಾತನಾಡಿದರು. ಪ್ರಥಮ ಎಪಿಸೋಡ್ ಪ್ರದರ್ಶನದ ಬಳಿಕ ಕಲಾವಿದರು ಅಭಿಮಾನಿಗಳೊಂದಿಗೆ ಸಂವಾದ ನಡೆಸಿದರು.

### 24 ಗಂಟೆ ಮಾತ್ರ ಎಪಿಸೋಡ್ ವೀಕ್ಷಣೆಗೆ

'ಮುಂದಿನ ಅಧ್ಯಾಯ' ವೆಬ್ ಸರಣಿಯ ಪ್ರತಿ ಎಪಿಸೋಡ್ 24 ಗಂಟೆಗಳ ಕಾಲ ಮಾತ್ರ ಯೂಟ್ಯೂಬ್‌ನಲ್ಲಿ ವೀಕ್ಷಣೆಗೆ ಲಭ್ಯವಿರಲಿದೆ. ಮುಂದಿನ ಎಪಿಸೋಡ್ ಪ್ರಸಾರವಾದ ಬಳಿಕ ಹಿಂದಿನ ಎಪಿಸೋಡ್ ವೀಕ್ಷಣೆಗೆ ದೊರೆಯುವುದಿಲ್ಲ. ಒಟ್ಟು 16 ಎಪಿಸೋಡ್‌ಗಳ ಮೂರು ಸೀಸನ್‌ಗಳಲ್ಲಿ ಸರಣಿ ಮೂಡಿಬರಲಿದೆ.

## ನಾಗಪುರ ದೀಕ್ಷಾಭೂಮಿ ಯಾತ್ರೆಗೆ ಅರ್ಜಿ ಆಹ್ವಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: 2026-27ನೇ ಸಾಲಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಅನುಯಾಯಿಗಳನ್ನು ಮಹಾರಾಷ್ಟ್ರದ ನಾಗಪುರದಲ್ಲಿರುವ ದೀಕ್ಷಾಭೂಮಿಗೆ ಕಳುಹಿಸುವ ಸಂಬಂಧ ಅರ್ಹ ಯಾತ್ರಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಪರಶಿವಮೂರ್ತಿ ತಿಳಿಸಿದ್ದಾರೆ.

ವಿಜಯದಶಮಿ ಅಂಗವಾಗಿ ಅ.21ರಂದು ದೀಕ್ಷಾಭೂಮಿಯಲ್ಲಿ ನಡೆಯಲಿರುವ ಪ್ರವರ್ತನ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಯ್ಕೆಯಾಗುವ ಯಾತ್ರಾರ್ಥಿಗಳನ್ನು ಕೆಎಸ್‌ಆರ್‌ಟಿಸಿ, ಇತರೆ ಸಾರಿಗೆ ಬಸ್ ಹಾಗೂ ರೈಲು ಮೂಲಕ ಕಳುಹಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಆದೇಶಿಸಲಾಗಿದೆ.

ಅರ್ಜಿದಾರರು ಆನ್‌ಲೈನ್ ಅರ್ಜಿ ಸಲ್ಲಿಸಿದ ಬಳಿಕ ಅದರ ಪ್ರತಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣಪತ್ರ, ಪಡಿತರ ಚೀಟಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಪ್ರತಿ ಹಾಗೂ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಅರಸೀಕೆರೆ ಸಮಾಜ ಕಲ್ಯಾಣ ಇಲಾಖೆಯ ಕಚೇರಿಗೆ ಸಲ್ಲಿಸಬೇಕು. ಅರ್ಜಿಯನ್ನು https://swd.karnataka.gov.in/ ಮೂಲಕ ಸಲ್ಲಿಸಬಹುದಾಗಿದೆ.

## ಶಿವಾನಂದ ತಗಡೂರು ಅವರಿಗೆ ತವರು ಪತ್ರಕರ್ತರ ಹೃದಯಸ್ಪರ್ಶಿ ಅಭಿನಂದನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪತ್ರಿಕೋದ್ಯಮ ಜೊತೆಗೆ ರಂಗಭೂಮಿ ಕ್ಷೇತ್ರದಲ್ಲೂ ಸುದೀರ್ಘ ಸೇವೆ ಸಲ್ಲಿಸಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಟಿ.ವಿ.ಶಿವಾನಂದ ತಗಡೂರು ಅವರು ಈ ಬಾರಿಯ ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜರಾಗಿದ್ದು, ಅವರನ್ನಿಂದು ಹಾಸನ ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು.

ಈ ವೇಳೆ ಮಾತನಾಡಿದ ಪತ್ರಕರ್ತರು, ರಂಗಭೂಮಿ ಹಾಗೂ ಪತ್ರಿಕೋದ್ಯಮವನ್ನು ಸಮಾಜದೊಂದಿಗೆ ಸಂವಾದ ನಡೆಸುವ ಪ್ರಬಲ ಮಾಧ್ಯಮಗಳನ್ನಾಗಿ ಬಳಸಿಕೊಂಡು ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶಿವಾನಂದ ತಗಡೂರು ಅವರ ಕೊಡುಗೆಯನ್ನು ಸ್ಮರಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಅಭಿನಂದನಾ ನುಡಿಗಳನ್ನಾಡಿದ ಸಂಘದ ಮಾಜಿ ಅಧ್ಯಕ್ಷ ಬಾಳ್ಳುಗೋಪಾಲ್, ಬಾಗೂರು ನವಿಲೆ ಹೋರಾಟದ ಮೂಲಕ ಪತ್ರಿಕೋದ್ಯಮಕ್ಕೆ ಬಂದ ಶಿವಾನಂದ ತಗಡೂರು, ಇಷ್ಟು ಎತ್ತರಕ್ಕೆ ಬೆಳೆಯಲು ಅವರ ಕರ್ತವ್ಯ, ಗುರಿ ಕಾರಣ. ಯಾವುದೇ ಸಾಧನೆಗೆ ಛಲ ಬೇಕು, ದೃಢ ನಿರ್ಧಾರ ಬೇಕು. ಹಾಗೆಯೇ ತ್ಯಾಗ ಗುಣಮೂ ಇರಬೇಕು. ಅದೆಲ್ಲಮೂ ಶಿವಾನಂದ ಅವರಲ್ಲಿದೆ ಎಂದು ಕೊಂಡಾಡಿದರು.

ಸೋಲೇ ಗೆಲುವಿನ ಮೆಟ್ಟಿಲು ಎಂದುಕೊಂಡು ತಾಳ್ಮೆಯಿಂದ ಕೆಲಸ ಮಾಡಿದ್ದರ ಪರಿಣಾಮ, ಇಂದು ರಾಜ್ಯಮಟ್ಟದಲ್ಲೂ



ಬೆಳೆದಿದ್ದಾರೆ. ಈ ಮೂಲಕ ನಮ್ಮೆಲ್ಲರಿಗೂ ಗೌರವ ತಂದುಕೊಟ್ಟಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆಪಿಎಸ್ ಪ್ರಮೋದ್ ಮಾತನಾಡಿ, ರಂಗಭೂಮಿಯ ಮೂಲಕ ಸಾಮಾಜಿಕ ಕಳಕಳಿಯ ವಿಚಾರಗಳನ್ನು ಜನರಿಗೆ ತಲುಪಿಸುವುದರ ಜತೆಗೆ, ನಾಟಕ ಪ್ರದರ್ಶನ, ನಾಟಕೋತ್ಸವ ಹಾಗೂ ವಿವಿಧ ಕಲಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ರಂಗಭೂಮಿಯ ಬೆಳವಣಿಗೆಗೆ ಶಿವಾನಂದ ತಗಡೂರು ಕೊಡುಗೆ ನೀಡಿದ್ದಾರೆ ಎಂದರು.

ಮತ್ತೊಬ್ಬ ಮಾಜಿ ಅಧ್ಯಕ್ಷ ಕೆ.ಆರ್.ಮಂಜುನಾಥ್ ಮಾತನಾಡಿ, ತಗಡೂರು ರಾಜ್ಯಮಟ್ಟದಲ್ಲಿ ಛಾಪು ಮೂಡಿಸಿದ್ದಾರೆ. ಬಾಗೂರು ನವಿಲೆ ಚಳವಳಿಯನ್ನು ರಾಷ್ಟ್ರ ಮಟ್ಟಕ್ಕೆ ತಲುಪಿಸಿದರು. ಅದರಲ್ಲಿ ಯಶಸ್ಸು ಕಂಡರು. ಅವರು ತಂಡ ಕಟ್ಟಿಕೊಂಡು ಅಭಿನಯಿಸಿರುವ ನಾಟಕಗಳು ಅಪಾರ ಜನಮನ್ನಣೆ ಗಳಿಸಿವೆ. ರಾಜ್ಯಮಟ್ಟದಲ್ಲಿ ಹೆಸರು ಮಾಡಿವೆ. ಈ ಪ್ರಶಸ್ತಿ ಮೊದಲೇ ಬರಬೇಕಿತ್ತು. ಮೂರನೇ ಬಾರಿಗೆ ಕೆಯೂಡಬ್ಲ್ಯೂಜೆ ಅಧ್ಯಕ್ಷರಾಗುವುದು ಸಾಮಾನ್ಯ ಅಲ್ಲ ಎಂದರು. ಪತ್ರಕರ್ತರ ಬಗ್ಗೆ ಅವರಿಗಿರುವ ಕಾಳಜಿ, ಸ್ಪಂದನಾ ಗುಣ ಅದರಲ್ಲೂ ಕೋವಿಡ್ ಸಂದರ್ಭದಲ್ಲಿ ಅವರು ನಡೆದುಕೊಂಡ ರೀತಿ ಅನನ್ಯ ಎಂದು ಗುಣಗಾನ ಮಾಡಿದರು.

ರಾಷ್ಟ್ರೀಯ ಮಂಡಳಿ ಸದಸ್ಯ ರವಿ ನಾಕಲಗೂಡು ಮಾತನಾಡಿ, ಜಿಲ್ಲೆಯ ಹೆಮ್ಮೆಯ ಸುಪುತ್ರ, ಯೋಗ್ಯರಿಗೆ ಯೋಗ್ಯ ಪ್ರಶಸ್ತಿ ಸಂದಿದೆ, ಕೋವಿಡ್ ಸಂದರ್ಭದಲ್ಲಿ ಅವರ ಕೆಲಸ ಶ್ಲಾಘನೀಯ ಎಂದರು.

ಮಾಜಿ ಅಧ್ಯಕ್ಷರಾದ ಉದಯ ಕುಮಾರ್, ಶಿವಾನಂದ ತಗಡೂರು ಉತ್ತಮ ನಟರು, ಸಂಘಟಕರು, ಹೋರಾಟಗಾರರು ಎಂದರೆ, ಕೆ.ಹೆಚ್.ವೇಣುಕುಮಾರ್, ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಿದರೂ ಪರಿಪೂರ್ಣವಾಗಿ ಮುಗಿಸಿದವರು ಶಿವಾನಂದ ತಗಡೂರು ಅವರು, ಬೆಂಗಳೂರು ಅವರು ಬೆಳೆದ ರೀತಿಯನ್ನು ಅಭಿನಂದಿಸಿದರು.

ಕಾರ್ಯದರ್ಶಿ ಕೆ.ಎಂ ಹರೀಶ್, ಸಾಂಸ್ಕೃತಿಕ ಸಮಿತಿ ಸಂಚಾಲಕ ಚಲಂ ಹಾಡ್ಲಹಳ್ಳಿ, ಶಿವಾನಂದ ತಗಡೂರು ಹಾದಿಯಲ್ಲಿ ನಾವೆಲ್ಲರೂ ಸಾಗೋಣ ಎಂದರು.

ಹಾಗೆಯೇ ಚನ್ನರಾಯಪಟ್ಟಣ ತಾ.ಪತ್ರಕರ್ತರ ಸಂಘದ ಅಧ್ಯಕ್ಷ ದಯಾನಂದ್ ಶೆಟ್ಟಿಹಳ್ಳಿ, ಅರಸೀಕೆರೆಯ ಆನಂದ್ ಟಿ, ಆಲೂರಿನ ಆದಿಲ್, ಬೇಲೂರಿನ ಶಿವರಾಜ್ ಬಿ.ಬಿ., ಸಕಲೇಶಪುರದ ಕಾಂತರಾಜ್ ಹೊನ್ನೇಕೋಡಿ, ಮಲ್ನಾಡ್ ಮೆಹಬೂಬ್, ಹೆತ್ತೂರು ನಾಗರಾಜ್, ಹಿರಿಯ ಪತ್ರಕರ್ತ ಆಲೂರು ಹರೀಶ್ ಮೊದಲಾದವರು ಮಾತನಾಡಿದರು.

ಕೆಯೂಡಬ್ಲ್ಯೂಜೆ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಮಾತಣಾಡಿ, ಶಿವಾನಂದ ತಗಡೂರು ಅವರ ನೇತೃತ್ವದಲ್ಲಿ ರಾಜ್ಯದ ಪತ್ರಕರ್ತರಿಗೆ ಅನೇಕ ರೀತಿಯ ಅನುಕೂಲ ಆಗುತ್ತಿದೆ. ಸಂಘಟನೆ ವಿಚಾರದಲ್ಲಿ ಮಾತ್ರ ನಾವು ಕೆಲವು ಮಾತುಗಳನ್ನಾಡಬಹುದು. ಅದು ಕೆಲವರಿಗೆ ಇರಿಸು ಮುರುಸು ತರಬಹುದು. ಆದರೆ ಶಿವಾನಂದ್ ಅವರು ಎಲ್ಲವನ್ನೂ ಸಹಿಸಿಕೊಂಡು ಪ್ರಾಮಾಣಿಕ ಕೆಲಸ ಮಾಡುತ್ತಿದ್ದಾರೆ ಎಂದು ಪ್ರಶಂಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಮಾತನಾಡಿ, ಶಿವಾನಂದ ತಗಡೂರು ಅವರ ಹೋರಾಟದ ಹಾದಿ, ಪತ್ರಿಕೋದ್ಯಮದ ಮೂಲಕ ಜನರ ಸಮಸ್ಯೆಗಳಿಗೆ ಧ್ವನಿಯಾಗಿರುವುದನ್ನು ಸ್ಮರಿಸಿದರು.

ಇದನ್ನೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಉಪಾಧ್ಯಕ್ಷ ಜಿ.ಪ್ರಕಾಶ್, ಪತ್ರಿಕೋದ್ಯಮ, ನಾಟಕರಂಗ, ಚಳುವಳಿ, ಸಾಕ್ಷರತೆ ಜಾಗೃತಿಯಲ್ಲಿ ತೊಡಗಿಸಿಕೊಂಡಿರುವ ಶಿವಾನಂದ ತಗಡೂರು ಅವರು ಪ್ರಶಸ್ತಿಗೆ ಅರ್ಹರು. ಇದು ಪತ್ರಕರ್ತರ ಸಮೂಹಕ್ಕೆ ಸಂದ ಗೌರವ ಎಂದರು.

> ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶಿವಾನಂದ ತಗಡೂರು ಅವರು, ನನಗೆ ಅಭಿನಂದನೆಗಿಂದ ಇಂದು ನಾವೆಲ್ಲರೂ ಒಂದಾಗಿ ಸೇರಿರುವುದು ದೊಡ್ಡ ವಿಚಾರ, ನನ್ನ ಹಾಗೂ ರಂಗಭೂಮಿಯೊಂದಿಗಿನ ನಂಟು ಹಾಸನದ ಬಹಳ ಮಂದಿಗೆ ಗೊತ್ತು.1996 ರಿಂದ ರಂಗಭೂಮಿ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದೇನೆ. ಸುಮಾರು 850 ಹಳ್ಳಿಗಳಿಗೆ ತೆರಳಿ ಪಂಚಾಯ್ತಿ ವ್ಯಾಪ್ತಿಯಲ್ಲಿ ಬೀದಿ ನಾಟಕ ಮಾಡಿದ್ದೇನೆ ಎಂದು ನೆನಪಿಸಿಕೊಂಡರು. ದೊಡ್ಡ ವೇದಿಕೆಗಳಿಗಿಂತ ಜನರ ಬಳಿಗೆ ತೆರಳಿ ಅವರ ಭಾಷೆ, ಬದುಕು ಹಾಗೂ ಸಮಸ್ಯೆಗಳೊಂದಿಗೆ ಬೆರೆತು ಮಾತನಾಡಿದಾಗ ರಂಗಭೂಮಿಯ ನಿಜವಾದ ಶಕ್ತಿ ಅರಿವಾಗುತ್ತದೆ. ಗ್ರಾಮೀಣ ಭಾಗದಲ್ಲಿ ನಡೆಸಿದ ಇಂತಹ ಚಟುವಟಿಕೆಗಳು ರಂಗಭೂಮಿಯ ಸಾಮಾಜಿಕ ಜವಾಬ್ದಾರಿಯನ್ನು ಮತ್ತಷ್ಟು ಅರ್ಥಮಾಡಿಕೊಟ್ಟವು ಎಂದು ಹೇಳಿದರು.

# ಕಸ್ತೂರಿ ರಂಗನ್ ವರದಿ ಜಾರಿ ಸಕಲೇಶಪುರದಲ್ಲಿ ಸಿಎಂ ಡಿ.ಕೆ. ಶಿವಕುಮಾರ್ ಸಭೆ

# ಸರ್ವಪಕ್ಷ ನಿಯೋಗದಿಂದ ಕೇಂದ್ರಕ್ಕೆ ಮನವಿ ಸಲ್ಲಿಕೆ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಕಸ್ತೂರಿ ರಂಗನ್ ವರದಿ ಜಾರಿಗೆ ಸಂಬಂಧಿಸಿದಂತೆ ನಾನು ಈ ಭಾಗದ ಎಲ್ಲಾ ಜನರ ನೋವು, ಸಂಕಷ್ಟ ಮತ್ತು ಅಭಿಪ್ರಾಯಗಳನ್ನು ಸಂಗ್ರಹ ಮಾಡಿದ್ದೇನೆ. ಈ ಕುರಿತು ಶೀಘ್ರದಲ್ಲೇ ವಿಧಾನಸಭೆಯ ವಿಶೇಷ ಅಧಿವೇಶನ ನಡೆಯಲಿದೆ. ಅಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಲಾಗುವುದು ಹಾಗೂ ಎಲ್ಲರ ಅಭಿಪ್ರಾಯ ಪಡೆಯಲಾಗುವುದು. ನಂತರ ಕೇಂದ್ರ ಸರ್ಕಾರಕ್ಕೆ ಸರ್ವ ಪಕ್ಷಗಳ ನಿಯೋಗ ತೆರಳಿ ವಾಸ್ತವ ಪರಿಸ್ಥಿತಿಯನ್ನು ಮನವರಿಕೆ ಮಾಡಿ ಅಧಿಕೃತ ಮನವಿ ನೀಡಲಾಗುವುದು" ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭರವಸೆ ನೀಡಿದರು.

ಪಟ್ಟಣದಲ್ಲಿ ಜಿಲ್ಲಾ ಆಡಳಿತ ಆಯೋಜಿಸಲಾಗಿದ್ದ ಕಸ್ತೂರಿ ರಂಗನ್ ವರದಿ ಕುರಿತು ಬೃಹತ್ ಸಾರ್ವಜನಿಕ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಕಸ್ತೂರಿ ರಂಗನ್ ವರದಿ ಬಂದ ನಂತರ ಕೇಂದ್ರ ಸರ್ಕಾರವು ತನ್ನ ನಿಲುವನ್ನು ಸ್ಪಷ್ಟಪಡಿಸಲು ಕೇವಲ ಎರಡು ತಿಂಗಳ ಗಡುವು ನೀಡಿ 40-45 ದಿನಗಳು ಕಳೆದಿವೆ ಎಂದು ವಿವರಿಸಿದರು.

ಹಿಂದೆ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದ ಅವಧಿಯಲ್ಲೂ ಈ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿ ಕೇಂದ್ರಕ್ಕೆ ಕಳುಹಿಸಲಾಗಿತ್ತು ಎಂದು ಅವರು ನೆನಪಿಸಿದರು.

ಅಧಿವೇಶನದಲ್ಲಿ ಬರಗಾಲ ಹಾಗೂ ಕಸ್ತೂರಿ ರಂಗನ್ ನಂತಹ ಜೀವನ್ಮರಣದ ಸಮಸ್ಯೆಗಳನ್ನು ಚರ್ಚಿಸದೆ ವಿರೋಧ ಪಕ್ಷಗಳು ರಾಜಕೀಯ ಲಾಭಕ್ಕಾಗಿ ರಾಜೀನಾಮೆ ಹೋರಾಟಕ್ಕೆ ಇಳಿದಿದ್ದವು ಎಂದು ಟೀಕಿಸಿದರು.

ಸಾರ್ವಜನಿಕರ ಹಿತದೃಷ್ಟಿಯಿಂದ ಅಧಿವೇಶನವನ್ನು ಮೊಟಕುಗೊಳಿಸಿದ ಬಳಿಕ, ಮಲೆನಾಡು ಮತ್ತು ಕರಾವಳಿ ಭಾಗದ ಶಾಸಕರು, ಸಂಸದರು ಹಾಗೂ ವಿಧಾನ ಪರಿಷತ್ ಸದಸ್ಯರೊಂದಿಗೆ ವಿಶೇಷ ಸಮಾಲೋಚನೆ ನಡೆಸಿ ಜನರ ಧ್ವನಿಯನ್ನು ಆಲಿಸಲು ಖುದ್ದು ತಾವೇ ಮಲೆನಾಡಿನ ಮನೆಬಾಗಿಲಿಗೆ ಬಂದಿರುವುದಾಗಿ ತಿಳಿಸಿದರು.

ವರದಿ ಜಾರಿಯಿಂದ ಜನವಸತಿ ಪ್ರದೇಶಗಳು, ತೋಟ-ಗದ್ದೆಗಳಿಗೆ ತೊಂದರೆಯಾಗಲಿದೆ ಎಂಬ ಸ್ಥಳೀಯರ ಆತಂಕಕ್ಕೆ ಸ್ಪಂದಿಸಿದ ಅವರು, ಉಪಗ್ರಹ ಆಧಾರಿತ ಸರ್ವೇಯ ಬದಲಾಗಿ ಕೇರಳ ಮಾದರಿಯಲ್ಲಿ ಭೌತಿಕ ರೀ-ಸರ್ವೆ ನಡೆಸುವ ಬೇಡಿಕೆಯನ್ನು



ಗಂಭೀರವಾಗಿ ಪರಿಗಣಿಸಲಾಗುವುದು ಎಂದರು.

ಅರಣ್ಯ ಇಲಾಖೆಯು ಅರಣ್ಯದ ಗಡಿಯೊಳಗೆ ತನ್ನ ನಿಯಮಗಳನ್ನು ಜಾರಿಗೊಳಿಸಬೇಕೇ ಹೊರತು, ತಲೆತಲಾಂತರಗಳಿಂದ ಕೃಷಿ ಮಾಡಿಕೊಂಡು ಬಂದಿರುವ ರೈತರ ಜಮೀನುಗಳಿಗೆ ಯಾವುದೇ ಕಿರುಕುಳ ನೀಡಬಾರದು ಎಂದು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಕೇಂದ್ರ ಸರ್ಕಾರದ ಅರಣ್ಯ ಹಕ್ಕು ಕಾಯ್ದೆಯಡಿ ಅರಣ್ಯ ಭೂಮಿಯ ಹಕ್ಕು ಪಡೆಯಲು ಪರಿಶಿಷ್ಟ ವರ್ಗಗಳಿಗೆ 25 ವರ್ಷ ಹಾಗೂ ಸಾಮಾನ್ಯ ಮತ್ತು ಹಿಂದುಳಿದ ವರ್ಗಗಳಿಗೆ 75 ವರ್ಷಗಳಿರುವ ಮಿತಿಯ ತಾರತಮ್ಯವನ್ನು ತೆಗೆದುಹಾಕಬೇಕು ಎಂದು ಪ್ರತಿಪಾದಿಸಿದರು.

ಎಲ್ಲಾ ಸಮುದಾಯದ ಬಡವರಿಗೂ ಏಕರೂಪವಾಗಿ 25 ವರ್ಷಗಳ ಮಾನದಂಡ ನಿಗದಿಪಡಿಸುವಂತೆ ರಾಜ್ಯ ವಿಧಾನಮಂಡಲದಲ್ಲಿ ಅಧಿಕೃತ ನಿರ್ಣಯ ಅಂಗೀಕರಿಸಿ ಕೇಂದ್ರಕ್ಕೆ ಕಳುಹಿಸಿಕೊಡಲಾಗುವುದು ಎಂದರು.

ಅರಣ್ಯದಂಚಿನ ಜನರಿಗೆ ವನ್ಯಜೀವಿಗಳ ಹಾವಳಿಯಿಂದ ರಕ್ಷಣೆ ಅಗತ್ಯವಿರುವಂತೆಯೇ, ಪರಿಸರ ಸಂರಕ್ಷಣೆಯೂ ಎಲ್ಲರ ಹೊಣೆಯಾಗಿದೆ ಎಂದು ತಿಳಿಸಿದರು.

ಪರವಾನಗಿ ಇಲ್ಲದ ಅಕ್ರಮ ನಾಡು ಬಂದೂಕುಗಳನ್ನು ಇಟ್ಟುಕೊಳ್ಳದೆ ನವೆಂಬರ್ 1ರೊಳಗೆ ಸರ್ಕಾರಕ್ಕೆ ಒಪ್ಪಿಸುವಂತೆ ಕರೆ ನೀಡಿದ ಅವರು, ತಮ್ಮ ರಕ್ಷಣೆಗಾಗಿ ಕಾನೂನು ಚೌಕಟ್ಟಿನಲ್ಲಿ ಅರ್ಜಿ ಸಲ್ಲಿಸಿ ಲೈಸೆನ್ಸ್ ಪಡೆದುಕೊಳ್ಳುವಂತೆ ಸ್ಪಷ್ಟಪಡಿಸಿದರು.

ಮಲೆನಾಡು ಮತ್ತು ಕರಾವಳಿ ಭಾಗದ ಯುವಕರು ಉದ್ಯೋಗಕ್ಕಾಗಿ ಗಲ್ಫ್ ಹಾಗೂ ಮುಂಬೈ ಕಡೆಗೆ ವಲಸೆ ಹೋಗುವುದನ್ನು ತಡೆಯಲು ಮೂಲಸೌಕರ್ಯ ಮಾನ್ಯತೆಯುಳ್ಳ ಪ್ರವಾಸೋದ್ಯಮ ನೀತಿಯನ್ನು ತರಲಾಗಿದೆ ಎಂದು ಪ್ರಕಟಿಸಿದರು.

ಜೊತೆಗೆ ರಸ್ತೆ ಬದಿಯ ಜಮೀನುಗಳ ಮುಂಭಾಗ ತೇಗದ ಮರಗಳನ್ನು ಬೆಳೆಸುವ 'ತೇಗದ ಸಿರಿ' ಯೋಜನೆಯನ್ನು ಪ್ರಸ್ತಾಪಿಸಿ, ಭವಿಷ್ಯದಲ್ಲಿ ಬರುವ ಆದಾಯದಲ್ಲಿ ಶೇ. 70ರಷ್ಟು ರೈತರಿಗೆ ಹಾಗೂ ಶೇ. 30ರಷ್ಟು ಸರ್ಕಾರಕ್ಕೆ ಹಂಚಿಕೆಯಾಗುವ ವ್ಯವಸ್ಥೆ ಮಾಡಲಾಗುವುದು ಎಂದರು.

ಬಗರ್ ಹುಕುಂ, 94ಸಿ, ಫಾರಂ 50, 53 ಸೇರಿದಂತೆ ಬಾಕಿ ಉಳಿದಿರುವ ಎಲ್ಲಾ ಭೂ ಮಂಜೂರಾತಿ ಮತ್ತು ಅಕ್ರಮ-ಸಕ್ರಮ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ, ರೈತರಿಗೆ ಖಾತೆ ಹಾಗೂ ಹಕ್ಕುಪತ್ರಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದರು.

ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, ಸಮಸ್ಯೆ ಆಲಿಸಲು ಸರ್ಕಾರವೇ ಜನರ ಬಳಿ ಬಂದಿರುವುದು ರಾಜ್ಯ ರಾಜಕಾರಣದಲ್ಲಿ ಹೊಸತು. ಕಸ್ತೂರಿ ರಂಗನ್ ವರದಿ ಸಮಸ್ಯೆ ಬಾಧಿತ ಜಿಲ್ಲೆಗಳಲ್ಲಿ ಮುಖ್ಯಮಂತ್ರಿಗಳು ಪ್ರವಾಸ ನಡೆಸಿದ ವೇಳೆ ಅಭೂತಪೂರ್ವ ಸ್ವಾಗತ ದೊರೆತಿರುವುದು ಕಾಂಗ್ರೆಸ್ ಸರ್ಕಾರಕ್ಕೆ ಹೊಸ ಉತ್ಸಾಹ ಮೂಡಿಸಿದೆ. ಕಸ್ತೂರಿ ರಂಗನ್ ವರದಿ ಪಶ್ಚಿಮಘಟ್ಟದ ತಪ್ಪಲಿನಲ್ಲಿರುವ ಕುಟುಂಬಗಳನ್ನು ಬುಡಮೇಲು ಮಾಡುತ್ತಿದೆ. ಆದ್ದರಿಂದ ಈ ವರದಿಯನ್ನು ಸರ್ಕಾರ ವಿಸರ್ಜಿಸುವಂತೆ ಕೇಂದ್ರಕ್ಕೆ ಮನವಿ ಮಾಡಬೇಕು ಎಂದರು.

ಉಪಗ್ರಹ ಆಧಾರಿತ ಚಿತ್ರದಿಂದ ವರದಿ ಸಿದ್ಧಪಡಿಸಿರುವುದು ತೀರಾ ಅವೈಜ್ಞಾನಿಕ. ಅರಣ್ಯ ಬೆಳೆಸಲು ಕೇಂದ್ರ ಸರ್ಕಾರ ಹೆಚ್ಚಿನ ಅನುದಾನ ನೀಡಲಿ. ಇದನ್ನು ಹೊರತುಪಡಿಸಿ ಜನರ ಜೀವನಾಡಿಯನ್ನೇ ಕಿತ್ತುಕೊಳ್ಳುವಂತಹ ಇಂತಹ ವರದಿ ಜಾರಿಗೊಳಿಸುವುದು ಶೋಭೆಯಲ್ಲ. ಪಶ್ಚಿಮಘಟ್ಟದಂಚಿನಲ್ಲಿರುವ ಜನರು ನಿಜವಾಗಿ ಅರಣ್ಯ ರಕ್ಷಕರು. ಇಂತಹವರನ್ನು ಹೊರಹಾಕಲು ಹೊರಟಿರುವುದು ತೀರಾ ನಾಚಿಕೆಗೇಡಿನ ಸಂಗತಿ ಎಂದರು.

ನಡುವೆ ಜನರು ಬದುಕು ನಡೆಸುತ್ತಿದ್ದಾರೆ. ಕಸ್ತೂರಿ ರಂಗನ್ ವರದಿ ಜಾರಿಯಾದರೆ ಮಲೆನಾಡ ಜನರಿಗೆ ಮರಣಶಾಸನ ಬರೆದಂತೆ.

ಮಲೆನಾಡಿನಲ್ಲಿ ಈ ಬಾರಿ ನಿರೀಕ್ಷಿತ ಮಳೆಯಾಗದ ಕಾರಣ ಜನರು ಈಗಲೇ ಬೆಳೆಗಳಿಗೆ ಹನಿ ನೀರಾವರಿ ಮಾಡುತ್ತಿದ್ದಾರೆ. ಆದ್ದರಿಂದ ಸಕಲೇಶಪುರ ವಿಧಾನಸಭಾ ಕ್ಷೇತ್ರವನ್ನು ಬರಪಟ್ಟಿಗೆ ಸೇರ್ಪಡೆಗೊಳಿಸಬೇಕು. ಜನರ ದೈನಂದಿನ ಕೆಲಸಕ್ಕೂ ಅಡ್ಡಿಯಾಗಿರುವ ಅರಣ್ಯ ಇಲಾಖೆಯ ಕಾನೂನು ಸರಳೀಕರಣಗೊಳಿಸುವ ಮೂಲಕ ಮಲೆನಾಡ ಜನರಿಗೆ ಬದುಕುವ ಹಕ್ಕು ಕಲ್ಪಿಸಬೇಕು. ಪ್ರವಾಸೋದ್ಯಮಕ್ಕೆ ಕ್ಷೇತ್ರ ಪ್ರಸಿದ್ಧವಾಗಿದ್ದು, ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೆ



ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಕಸ್ತೂರಿ ರಂಗನ್ ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸಬೇಕು. ಮಲೆನಾಡಿನ ಜನರಿಂದ ಪರಿಸರಕ್ಕೆ ಎಂದಿಗೂ ಹಾನಿ ಉಂಟಾಗುವುದಿಲ್ಲ. ಮಲೆನಾಡಿಗರಿಂದಲೇ ಇದುವರೆಗೆ ಪಶ್ಚಿಮಘಟ್ಟ ಉಳಿದಿದೆ. ಮಲೆನಾಡಿನಲ್ಲಿ ಮಳೆ ಕಡಿಮೆಯಾಗಿದೆ. ಆದ್ದರಿಂದ ಸಕಲೇಶಪುರ ವಿಧಾನಸಭಾ ಕ್ಷೇತ್ರವನ್ನು ಬರಪಟ್ಟಿಗೆ ಸೇರ್ಪಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ಶಾಸಕ ಸೀಮೆಂಟ್ ಮಂಜು ಮಾತನಾಡಿ, ಈಗಾಗಲೇ ಕ್ಷೇತ್ರದ ಜನರು ಅರಣ್ಯ ಇಲಾಖೆಯ ವಿವಿಧ ಕಾನೂನುಗಳಿಂದ ನೊಂದು ಹೋಗಿದ್ದಾರೆ. ಇನ್ನೂ ಕಸ್ತೂರಿ ರಂಗನ್ ವರದಿ ತಂದರೆ ಜನರ ಪರಿಸ್ಥಿತಿ ತೀರಾ ಹದಗೆಡಲಿದೆ. ತಾಲೂಕಿನಲ್ಲಿ ನೂರಾರು ಜ್ವಲಂತ ಸಮಸ್ಯೆಗಳು ತಾಂಡವವಾಡುತ್ತಿದ್ದು, ಸಮಸ್ಯೆಗಳ ಪ್ಯಾಕೇಜ್ ಘೋಷಿಸಬೇಕು ಎಂದು ಆಗ್ರಹಿಸಿದರು.

ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಮಾತನಾಡಿ, ಕಸ್ತೂರಿ ರಂಗನ್ ವರದಿ ಚರ್ಚೆ ಕಾರ್ಯಕ್ರಮ ರಾಜಕೀಯೇತರವಾಗಿದ್ದು, ಇಲ್ಲಿ ಎಲ್ಲ ಪಕ್ಷಗಳ ಮುಖಂಡರು ಭಾಗಿಯಾಗಿದ್ದಾರೆ. ನೈಜವಾಗಿ ಸಮಸ್ಯೆ ಅರಿಯಲು ಸರ್ಕಾರವೇ ರೈತರ ಮನೆಬಾಗಿಲಿಗೆ ಆಗಮಿಸುವ ಮೂಲಕ ಹೊಸ ಪರಂಪರೆಗೆ ಕಾಂಗ್ರೆಸ್ ಸರ್ಕಾರ ಭೂನಾದಿ ಹಾಕಿದೆ. ಇದಲ್ಲದೆ, ವರದಿ ಚರ್ಚೆ ನಡೆಸಲು ಮೂರು ದಿನಗಳ ವಿಶೇಷ ವಿಧಾನಸಭಾ ಅಧಿವೇಶನ ನಡೆಸಲಿದ್ದು, ವರದಿಗೆ ತಾರ್ಕಿಕ ಅಂತ್ಯ ಕಾಣುವವರೆಗೆ ಮುಖ್ಯಮಂತ್ರಿ ವಿಶ್ರಮಿಸುವುದಿಲ್ಲ. ಆದ್ದರಿಂದ, ಸೂಕ್ಷ್ಮ ಪರಿಸರ ವಲಯಕ್ಕೆ ಸೇರ್ಪಡೆಗೊಂಡಿರುವ ಜನರು ಆತಂಕಗೊಳ್ಳುವ ಅಗತ್ಯವಿಲ್ಲ ಎಂದರು.

## ಶಿಕ್ಷಕ ಅಂತೋಣಿ ಮುತ್ತುಗೆ ರಾಜ್ಯ ಮಟ್ಟದ ಶಿಕ್ಷಣ ಸೇವಾ ರತ್ನ ಪ್ರಶಸ್ತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು/ಚಾಮರಾಜನಗರ: ಶಿಕ್ಷಣ ಕ್ಷೇತ್ರದಲ್ಲಿನ ಗಣನೀಯ ಸೇವೆ ಹಾಗೂ ಬದ್ಧತೆಯನ್ನು ಗುರುತಿಸಿ ಚಾಮರಾಜನಗರದ ಶಿಕ್ಷಕ ಶ್ರೀ ಅಂತೋಣಿ ಮುತ್ತು ವಿ. ಅವರಿಗೆ ಕರ್ನಾಟಕ ಪ್ರೆಸ್ ಕ್ಲಬ್ ವತಿಯಿಂದ 2026ನೇ ಸಾಲಿನ ಪ್ರತಿಷ್ಠಿತ ರಾಜ್ಯ ಮಟ್ಟದ ಶಿಕ್ಷಣ ಸೇವಾ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಭಾರತದ ಮಾಜಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಸವಿನೆನಪಿನಲ್ಲಿ ಶಿಕ್ಷಕರ ದಿನಾಚರಣೆ ಪ್ರಯುಕ್ತ ಆಯೋಜಿಸಲಾಗಿದ್ದ ಗುರು-ನಮನ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. ಬೆಂಗಳೂರಿನ



ಸರ್. ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್) ನಡೆದ ಸಮಾರಂಭದಲ್ಲಿ ಈ ಗೌರವ ಸಮರ್ಪಿಸಲಾಯಿತು.

ಶಿಕ್ಷಣ ಕ್ಷೇತ್ರಕ್ಕೆ ಶ್ರೀ ಅಂತೋಣಿ ಮುತ್ತು ಅವರು ನೀಡಿರುವ ಅಪಾರ ಸೇವೆ, ಅತ್ಯುತ್ತಮ ಬೋಧನಾ ಕೌಶಲ್ಯ, ವಿದ್ಯಾರ್ಥಿಗಳಿಗೆ ನೀಡುತ್ತಿರುವ ಮಾರ್ಗದರ್ಶನ, ಆಡಳಿತ ನಿರ್ವಹಣೆ ಹಾಗೂ ಅವರ ಜವಾಬ್ದಾರಿಯುತ ಸೇವೆಯನ್ನು ಪರಿಗಣಿಸಿ ಸರ್ವಾನುಮತದಿಂದ ಅವರನ್ನು ಈ ರಾಜ್ಯ ಮಟ್ಟದ ಗುರು ಶ್ರೇಷ್ಠ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು ಎಂದು ಕರ್ನಾಟಕ ಪ್ರೆಸ್ ಕ್ಲಬ್ ತಿಳಿಸಿದೆ.

ಅಜ್ಞಾನದಿಂದ ಜ್ಞಾನದೆಡೆಗೆ ಮಗುವಿನ ಜೀವನ ಸಾಗಿಸುವ ಗುರುವಿನ ಪಾತ್ರ ಅತ್ಯಮೂಲ್ಯವಾದದ್ದು. ಯಾವುದೇ ಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥ ಮನಃಶುದ್ಧಿಯಿಂದ ಸೇವೆ ಸಲ್ಲಿಸುತ್ತಿರುವ ಇಂತಹ ಗುರು ಶ್ರೇಷ್ಠರನ್ನು ಗುರುತಿಸಿ ಸನ್ಮಾನಿಸುವುದು ಸಮಾಜದ ಕರ್ತವ್ಯ ಎಂದು ಆಯೋಜಕರು ಅಭಿಪ್ರಾಯಪಟ್ಟರು.

ಪ್ರೆಸ್ ಕ್ಲಬ್ ರಾಜ್ಯಾಧ್ಯಕ್ಷ ಎಸ್. ರಾಮಸ್ವಾಮಿ ಮತ್ತು ಪ್ರಧಾನ ಕಾರ್ಯದರ್ಶಿ ಎಸ್.ಜಿ.ರಮೇಶ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು, ಶಿಕ್ಷಕರ ನಿಸ್ವಾರ್ಥ ಸೇವೆಯನ್ನು ಶ್ಲಾಘಿಸಿದರು.

## ನಾಳೆ ಜಿಲ್ಲೆಯ ಹಲವೆಡೆ ವಿದ್ಯುತ್ ವ್ಯತ್ಯಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ) ವತಿಯಿಂದ ಸೆ.23ರಂದು ಹಾಸನ, ಮಗ್ಗೆ, ಕಂದಲಿ, ಬಾಳುಪೇಟೆ, ಸಕಲೇಶಪುರ, ಹಾನುಬಾಳು ಹಾಗೂ ಅರೇಹಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳು ಮತ್ತು 66 ಕೆ.ವಿ. ಮಾರ್ಗಗಳಲ್ಲಿ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಹಾಸನ ವಿ.ವಿ. ಕೇಂದ್ರ: ಸಂತೆಪೇಟೆ ಸರ್ಕಲ್, ಸಿದ್ದಯ್ಯ ನಗರ, ಗಾಂಧಿ ಬಜಾರ್, ತಣ್ಣೀರುಹಳ್ಳ, ವಿಜಯನಗರ, ಕೆಎಚ್‌ಬಿ, ಶ್ರೀನಗರ, ಎನ್.ಆರ್. ವೃತ್ತ, ಹಾಸನಾಂಬ ದೇವಾಲಯ ಸುತ್ತಮುತ್ತ, ಹುಣಸಿನಕೆರೆ, ಮೈಕ್ರೋವೇವ್, ಬಿಟ್ಟಗೋಡನಹಳ್ಳಿ, ಮೆಡಿಕಲ್ ಕಾಲೇಜು, ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ, ಆಜಾದ್ ರಸ್ತೆ, ವಲ್ಲಭಭಾಯಿ ರಸ್ತೆ, ನಗರಸಭೆ ಕಚೇರಿ, ಕಟ್ಟಿನಕೆರೆ ಮಾರುಕಟ್ಟೆ, ದೇವೇಗೌಡನಗರ, ಹನುಮಂತಪುರ, ಅಗಿಲೆ, ಎರೆಬೋರೆಕಾವಲು, ತಟ್ಟೆಕೆರೆ, ಮಾರಿಗುಡಿಕೊಪ್ಪಲು, ಚನ್ನಪಟ್ಟಣ, ಹೊಸಕೊಪ್ಪಲು, ದೇವಮ್ಮ ಬಡಾವಣೆ, ಮಾರ್ಗನಹಳ್ಳಿ, ಬೈಲಹಳ್ಳಿ, ಬಸವೇಶ್ವರನಗರ, ಹೊಯ್ಸಳ ರೆಸಾರ್ಟ್ ಸೇರಿದಂತೆ ಸುತ್ತಮುತ್ತಲಿನ ಸರ್ಕಾರಿ ಕಚೇರಿಗಳು, ಶಾಲಾ-ಕಾಲೇಜುಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮಗ್ಗೆ ವಿ.ವಿ. ಕೇಂದ್ರ: ಕಾರಗೋಡು, ಮಗ್ಗೆ, ಚನ್ನಾಪುರ, ಗಂಗಾರ ಹಾಗೂ ಪಾಳ್ಯ.

ಕಂದಲಿ ವಿ.ವಿ. ಕೇಂದ್ರ: ಆಲೂರು ಪಟ್ಟಣ, ಗುಡ್ಡನಹಳ್ಳಿ, ಹುಣಸೆವಳ್ಳಿ, ಪಾಳ್ಯ, ಬೈರಾಪುರ, ಕಂದಲಿ, ಶೆಟ್ಟಿಹಳ್ಳಿ, ಶಂಕರನಹಳ್ಳಿ, ಅಗಲಹಳ್ಳಿ ಹಾಗೂ ಕಣತೂರು.

ಸಕಲೇಶಪುರ ವಿ.ವಿ. ಕೇಂದ್ರ: ಹಾರ್ಲೆ, ಶುಕ್ರವಾರಸಂತೆ, ಮಳಲಿ, ಸಕಲೇಶಪುರ, ಉದಯವಾರ, ಆನೆಮಹಲ್ ಹಾಗೂ ಬೆಳಗೋಡು.

ಅರೇಹಳ್ಳಿ ವಿ.ವಿ. ಕೇಂದ್ರ: ಮಲಸಾವರ, ಅರೇಹಳ್ಳಿ, ಲಕ್ಕುಂದ, ಕೆಸಗೋಡು, ಮಾಲೆಗೆರೆ, ಅನುಘಟ್ಟ ಹಾಗೂ ಬಾವಿಕಟ್ಟೆ. ಹಾನುಬಾಳು ವಿ.ವಿ. ಕೇಂದ್ರ: ದೇವಲದಕೆರೆ, ಹುರುಡಿ, ವೆಂಕಟಹಳ್ಳಿ ಹಾಗೂ ಕಾಡುಮನೆ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ನಿರ್ವಹಣಾ ಕಾಮಗಾರಿಗೆ ಸಾರ್ವಜನಿಕರು ಸಹಕರಿಸಬೇಕು ಎಂದು ಕವಿಪ್ರನಿನಿ ಹಾಸನ ಕಾರ್ಯಾಚರಣೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಸೆಪ್ಟೆಂಬರ್-22



1862: ಅಮೆರಿಕದ ಅಧ್ಯಕ್ಷ ಅಬ್ರಹಾಂ ಲಿಂಕನ್ ಗುಲಾಮಗಿರಿ ನಿರ್ಮೂಲನೆಗೆ ಸಂಬಂಧಿಸಿದ ಪ್ರಾಥಮಿಕ ಘೋಷಣೆಯನ್ನು ಹೊರಡಿಸಿದರು.

1965: ಭಾರತ-ಪಾಕಿಸ್ತಾನ ನಡುವಿನ 1965ರ ಯುದ್ಧದಲ್ಲಿ ವಿಶ್ವಸಂಸ್ಥೆಯ ಕದನ ವಿರಾಮದ ಕರೆ ಜಾರಿಗೆ ಬಂದು ಯುದ್ಧ ಅಂತ್ಯಗೊಂಡಿತು.

1980: ಇರಾಕ್-ಇರಾನ್ ಮೇಲೆ ದಾಳಿ ನಡೆಸುವುದರೊಂದಿಗೆ ಇರಾನ್-ಇರಾಕ್ ಯುದ್ಧ ಆರಂಭವಾಯಿತು. ಸುಮಾರು ಎಂಟು ವರ್ಷಗಳ ಕಾಲ ನಡೆದ ಈ ಯುದ್ಧದಲ್ಲಿ ಭಾರಿ ಪ್ರಮಾಣದ ಜೀವಹಾನಿ ಸಂಭವಿಸಿತು.

1991: ಡೆಡ್ ಸೀ ಸ್ಕ್ರೋಲ್ಸ್ ಸಾರ್ವಜನಿಕರಿಗೆ ಮೊದಲ ಬಾರಿಗೆ ಲಭ್ಯವಾದವು.

**ಜನನ**

1791: ವಿದ್ಯುತ್ ಚುಂಬಕತ್ವದ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ನೀಡಿದ ವಿಜ್ಞಾನಿ ಮೈಕೆಲ್ ಫ್ಯಾರಡೇ

1958: ಪ್ರಸಿದ್ಧ ಇಟಾಲಿಯನ್ ಗಾಯಕ ಆಂದ್ರೇಯ ಬೊಚೆಲ್ಲಿ

**ನಿಧನ**

1991: ಖ್ಯಾತ ಭಾರತೀಯ ನಟಿ ದುರ್ಗಾ ಖೋಟೆ

2015: ಅಮೆರಿಕದ ಪ್ರಸಿದ್ಧ ಬೇಸ್‌ಬಾಲ್ ಆಟಗಾರ ಯೋಗಿ ಬೆರ್ರಾ

1539: ಸಿಖ್ ಧರ್ಮದ ಮೊದಲ ಗುರು ಗುರು ನಾನಕ್ ದೇವ್

1776: ಅಮೆರಿಕದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟಿಷರು ಗೂಢಚರ್ಯೆ ಆರೋಪದ ಮೇಲೆ ನಾಥನ್ ಹೇಲ್ ಅವರನ್ನು ಗಲ್ಲಿಗೇರಿಸಿದರು.

## ಬೇಳೇಸಾರೆಂತಕೆ,......ತೊಳಿಯಕ್ಕಾ..? – 5

**– ಧನಂಜಯ ಜೀವಾಳ**

ಹಿಂದಿನ ದಿನ ಮರಗಸಿ ಮಾಡಲು ಬಂದ ಜಗ್ಗನಿಗೆ ಬೋಬಯ್ಯ ತಮಾಷೆಗೆಂಬಂತೆ ''ಅಲ್ಲಾ ಕಣಾ ಮಾರಾಯ, ಬೆಳಿಗ್ಗೆಯಿಂದ ಈ ಲಾಟ್‌ಪೂಟ್ ಹತ್ತೇಹತ್ತು ಮರದ ಕೊನೆ ಕಡ್ದೀಯಲ; ನೀವು ಇನ್ನೂ ಹಿಂಗೆ ಇದ್ರೆ ನಮ್ಮ ದೇಶ ಅಮೇರಿಕ ಆದಂಗೇನೇ'' ಎಂದಿದ್ದ.

ನೂರಡಿಗೂ ಹೆಚ್ಚು ಎತ್ತರದ ಹನಲ್ತಾರೀ ಮರದ ಕೊನೆಗಳನ್ನು ಕಡಿದು ಕೆಳಗಿಳಿದ ಜಗ್ಗ, ''ಅಮೇರಿಕದ್ದೇ ಸಂಬಳಾ ಕೊಟ್ನೋಡಿ, ಮುಂದಿನ ವಾರದಿಂದ್ಲೇ ನಾವೆಲ್ರೂ ಅಮೇರಿಕನ್ಸೂ, ತಿಳ್ಕಳೀ ಬೋಬಣ್ಣಯ್ಯಾರೇ'' ಎಂದು ಗಹಗಹಿಸಿ ನಗುತ್ತಾ ರಪಕ್ಕನೇ ಎದುರುತ್ತರ ಕೊಟ್ಟ. ಹೆಚ್ಚೂ ಕಡಿಮೆ ತನ್ನ ಜಮೀನಿನ ಎಲ್ಲ ಕೆಲಸಗಳನ್ನು ತಾನು ಮತ್ತು ತನ್ನ ಹೆಂಡತಿಯೇ ಮಾಡಿಕೊಳ್ಳುತಿದ್ದರೂ, ಮರ ಹತ್ತುವುದು ಸ್ವಲ್ಪ ಅಪಾಯಕಾರಿ ಹಾಗೂ ಪರಿಣತಿ ಬೇಡುವ ಕೆಲಸವಾದ್ದರಿಂದ ಮತ್ತು ಈಗ್ಗೆ ಹದಿನೈದು ದಿನದ ಹಿಂದೆ ಗದ್ದೆ ಬದುವಲ್ಲಿ ನಡೆಯುತಿದ್ದಾಗ ಎಡಗಾಲು ಹೊಳ್ಳಿ ಕಾಲಿನ ಕಂಬ ಮತ್ತು ಪಾದ ಸೇರುವಲ್ಲಿ ಉಳುಕಿದಂತಾಗಿತ್ತು. ಹಾಗಾಗಿ ಮನೆಯ ಹತ್ತಿರವೇ ಇದ್ದ ಅಕ್ಕಮ್ಮನ ಮಗ ಜಗ್ಗನನ್ನು ಮರಗಸಿ ಮಾಡಿಕೊಡಲು ಗೊತ್ತುಮಾಡಿಕೊಂಡಿದ್ದ, ಜಗ್ಗ ಕಡಿದು ಕೆಳಗೆ ಹಾಕಿದ್ದ ಕೊನೆಗಳನ್ನು ಸೌದೆಯಾಗಿ ಸೊಗರಲು ಯಾರದ್ರೂ ಜನಾ ಸಿಕ್ತಾರ ಎಂದು ಹುಡುಕಲು ಹೊರಟಿದ್ದ.

ಒಕ್ಕಲಾಟದ ಸಮಯದಲ್ಲಿ ಮೇವುಹಾಕಿ ಕೋಳಿ ಕರೆದರೆ ಬರದಿರುವಂತೆ, ಎಲೆಕ್ಷನ್ ಸಮಯದಲ್ಲಿ ಕೆಲಸಕ್ಕೆ ಜನ ಬರದೇ ತಿಕಾ ತಿರುಗಿಸಿಕೊಂಡು ಹೋಗ್ತಾರೆ. ಎದುರಿಗೆ ಸಿಕ್ಕಿದ ಕೆಳ್ಳಾಮನೆ ಜುಂಜಪ್ಪ, ''ಕೆಲಸಕ್ಕೆ ಜನಾನೇ ಬರ್ತಿಲ್ಲ ಮಾರಾಯ. ನಾವು ಸುಮ್ನೇ ಬೇಲಿ ಹಾಕಿ, ಕಾಡು ಕಡಿದು, ಕಾಯ್ದಿದ್ದೇ ಬಂತು. ಸೆಕ್ರೆಟ್ರಿ ಸೂಳೆಮಗ ಎರ್ಡೆಕರೆ ಮಂಜೂರು ಮಾಡ್ಸಿಕೊಡ್ತೀನಿ ಅಂತ ಹತ್ಸಾವುರ್ರುಪಾಯಿ ಬೇರೆ ಇಸ್ಕಂಡಿದಾನೆ. ಈಗ ಟ್ರಾನ್ಸ್‌ಫರಾಗಿ ಹೋದ. ಈಗಿನ್ಯಾವನು ಬರ್ತಾನೋ, ಏನ್ಕಥೇನೋ? ಫಾರೆಸ್ಟಿನೋರು ಬೇರೆ ಪ್ರಾಣ ತಿಂತಿದಾರೆ! ಕದ್ದುಮುಚ್ಚಿ ಬೀಟೆಮರ ಕಡಿಬೋದಂತೆ, ಕಳಿಲೆ ಮುರಿಯಂಗಿಲ್ಲಂತೆ. ಬೇಲಿ ಜರುಗಿಸಿ ಒತ್ತುವರಿ



ಮಾಡ್ಬಹುದಂತೆ, ಶಿಕಾರಿ ಮಾಡಂಗಿಲ್ಲಂತೆ. ಇದ್ಯಾವ ನ್ಯಾಯ ಮಾರಾಯ?'' ಎಂದು ಕೃಷಿಬದುಕಿನ ಹಳವಂಡಗಳನ್ನು ಹೇಳಿಕೊಂಡು ಕೊರಗಾಡಿದ್ದ.

ಎಂದಿನಂತೆ ತಣ್ಣಗಿದ್ದ ಊರಿನಲ್ಲಿ ಇದೇನೋ ಹೊಸಾ ಬೆಳವಣಿಗೆಯಾಗುತ್ತಿರುವುದನ್ನು ಗಮನಿಸಿದ ಬೋಬಯ್ಯ ನಾಗೇಶನ ಗೂಡಂಗಡಿಗೆ ಹೋಗಿ ಒಂದ್ಕಟ್ಟು ಬೀಡಿ, ಬೆಂಕಿಪಟ್ಣ ಮತ್ತು ದೇವಕಿಗೆ ಇಷ್ಟ ಎಂದು ಎರಡು ಪ್ಯಾಕೆಟ್ಟು ಬೋಟಿಯನ್ನು ಕೊಂಡ. ಮನೆಗೆ ಹಿಂದಿರುಗಲೆಂದು ಹೊರಟವನು ಏನೋ ನೆನಪಾದಂತಾಗಿ ಮನೆ ನಾಯಿಗಳಿಗೆಂದು ಒಂದು ಪ್ಯಾಕೆಟ್ ಬಟರ್ ಅನ್ನೂ ಕೊಂಡ.

ಅಂಗಡಿಯಲ್ಲಿದ್ದ ನಾಗೇಸನ ಹೆಂಡತಿ ''ಬೋಬಣ್ಣಯ್ಯರೇ ನಿಮ್ ತ್ವಾಟದೊಳ್ಗೇ ರಸ್ತೆ ಅಳ್ತೆ ಮಾಡ್ತಿದಾರಂತೆ ಹೌದಾ?'' ಎಂದಳು. ಕುದ್ದುಕ್ಕುದ್ದು ಹೊರಚೆಲ್ಲಲು ಕಾಯುತ್ತಿದ್ದ ಸಿಟ್ಟನ್ನು ಸ್ರರಕ್ ಅಂತ ಬಿಸಾಕಿದ ಬೋಬಯ್ಯ ''ಈ ಸೂಳೇ ಮಕ್ಳಿಗೆ ನನ್ತೋಟನೇ ಬೇಕಾ?'' ಎಂದು ದೊಡ್ಡ ದನಿಯಲ್ಲಿ ಅಬ್ಬರಿಸಿದ. ಎಂದೂ ದನಿಯೇರಿಸಿ ಮಾತನಾಡದ ಬೋಬಯ್ಯ ಈ ರೀತಿ ಅಬ್ಬರಿಸಿದನ್ನು ಕಂಡು ನಿಶಾನಿ, ಸುಗ್ಗಿಹಬ್ಬ ಕುರಿತು ಮಾತನಾಡುತಿದ್ದ ಗುಂಪಿನವರು ಅವಾಕ್ಕಾದರು. ಬೋಬಯ್ಯನ ಕೈಯ್ಯಲಿದ್ದ ಬೋಟಿ ಪ್ಯಾಕೆಟ್ಟುಗಳು ಅವನ ಕೈಯಲ್ಲೇ ಪುಡ್ಡಿಪ್ಪುಡ್ಡಿಯಾದವು. ''ವಾ! ಬೋಟಿ ಪ್ಯಾಕೆಟ್ ಹುಡಿ ಮಾಡ್ಕಂಡ್ರಲ ಬೋಬಣ್ಣಯ್ಯಾರೆ'' ಎಂದಳು ನಾಗೇಸನ ಹೆಂಡ್ತಿ. ಅಷ್ಟರಲ್ಲಿ ರಂಗ, ಸುಬ್ಬ, ದಿಬ್ಬ ಎಲ್ಲ ಅಂಗಡಿ ಮುಂದೆ ಜಮಾವಣೆಯಾದರು. ಲೋಕವಳ್ಳಿಯಿಂದ ಭಟ್ಟಿ ಶರಾಬಿನ ಕ್ಯಾನು ತರಲು ಹೋಗಿದ್ದ ನಾಗೇಶನೂ 'ಯಂತಾ ಆಯ್ತ್ರಾ?' ಎಂದು ಕೂಗಿದವನೇ ಮನೆ ಹಿಂಭಾಗದ ದನಿನ್ ಕೊಟ್ಟಿಗೆಯ ಹಿಂಬದಿಯ ಹುಲ್ಲಿನ ಕೊಡಬೆಯ ಸಂದೀಲಿ ಶರಾಬಿನ ಕ್ಯಾನು ಅಡಗಿಸಿಟ್ಟು, ಅಂಗಡಿ ಬಳಿಗೆ ಓಡಿ ಬಂದ. ''ಯಂತಾ ಆಯ್ತು ಬೋಬಣ್ಣಯ್ಯಾರೆ?'' ಎಂದ ರಂಗ. ತನ್ನ ಜಮೀನಿನ ಒಳಗೆ ನಡೆಯುತ್ತಿರುವ ರಸ್ತೆ ಕಾಮಗಾರಿ ಮತ್ತು ಷಣ್ಮುಖನ ಮನೆಹಾಳು ಕೆಲಸಗಳನ್ನು ವಿವರಿಸಿದ ಬೋಬಯ್ಯ. ''ಬೋಬಣ್ಣಯ್ಯಾರೆ ನೀವೇನೂ ತಲೆಕೆಡಿಸ್ಕಬೇಡಿ, ಆ ಷಣ್ಮುಖನ ಸೊಕ್ಕು ಮುರಿಯಕ್ಕೆ ನಾಮೂ ಕಾಯ್ತಾ ಇದೀವಿ. ಹೋದ ಬಾರಿ ಪಂಚಾಯ್ತಿ ಎಲೆಕ್ಷನ್ನಲ್ಲಿ ನಮ್ಮನ್ನೆಲ್ಲಾ ಮರುಳುಮಾಡಿ, ಇಡೀ ಕಾಲೋನಿಯ ಓಟುಗಳನ್ನು ಕೂಳಿಗೆ ಬಿದ್ದ ಮೀನು ಸುರ್ಕಂಡು ಹೋದಂಗೆ ಹಾಕಿಸ್ಕಂಡು, ಅವತ್ತಿಂದ ಇವತ್ತಿನ ವರೆಗೆ ಈ ಕಡೆ ತಲೆ ಹಾಕಿಲ್ಲ. ನಮ್ಮೂರಿಗೆ ಮಂಜೂರಾಗಿದ್ದ ಬಸ್ ಬರದಂಗೆ ಮಾಡಿ, ನಾವ್ಯಾರೂ ಪ್ಯಾಟಿಗೆ ಹೋಗದಂಗೆ ಮಾಡಿಬಿಟ್ಟ. ರಸ್ತೆ ರಿಪೇರಿಯಾಗಿ ಜಲ್ಲಿ ಹಾಕದಿದ್ರೆ ಬಸ್ ಬರೋದಾದ್ರೂ ಹೇಗೆ? ನಮ್ಮಗಳ ಮಕ್ಕಳು ಸ್ಕೂಲಿಗೆ ಹೋಗದಾದ್ರೂ ಹೇಗೆ? ನಮ್ಮಕ್ಳು ಸ್ಕೂಲಿಗೆ ಹೋದ್ರೆ ತೋಟದ ಕೂಲಿಗೆ ಜನಾ ಸಿಗಕ್ಲಾಂತ ರಸ್ತೆ ಆಗದಂಗೆ, ಬಸ್ ಬರದಂಗೆ ಮಾಡ್‌ಬುಟ್ಟ ನೀಚ! ಇಲ್ಲಿ ಕಾಡಿಗೆಲ್ಲ ಬೇಲಿ ಹಾಕಿ, ಈತನ್ ಮಕ್ಳನ್ನ ಬೋರ್ಡಿಂಗ್ ಸ್ಕೂಲಿಗೆ ಸೇರಿಸಿದಾನೆ. ತಿಂಗ್ಳಿಗೊಂದ್ಸಲ ಗಂಡುಗೂ ಹೆಂಗ್ಸಿಗೂ ಕಾರಲ್ಲಿ ಸ್ಕೂಲಿಗೊಂದು ಟೂರು. ನಾವಿಲ್ಲಿ ಈತ್ರುಗಳ ಮನೆ ಜೀತ ಮಾಡ್ಕಂಡು, ನಮ್ಗುಟ್ಟಿದ ಮಕ್ಳೂವಾ ಇವರ್ಮನೆ ಜೀತಕ್ಕೆ ಇಲ್ಲೇ ಇರಬೇಕು. ಇದ್ದೊಂದು ಪ್ರೈಮರಿ ಸ್ಕೂಲ್ನೂ ಮುಚ್ಚಿಸಿಬಿಟ್ಟ'' ಒಂದೇ ಉಸಿರಿಗೆ ಇದ್ದಬದ್ದ ಆಕ್ರೋಶವನ್ನೆಲ್ಲ ಹೊರಹಾಕಿದ ಗೋಪಾಲ.

ಯಾರೂ ದಿಕ್ಕಿಲ್ಲವೆಂದು ಅಬ್ಬೇಪಾರಿಯಾಗಿದ್ದ ಬೋಬಯ್ಯ ತನ್ನ ವೈರಿಗೂ ಇರುವ ವೈರಿಗಳನ್ನು ನೋಡಿ ಸಮಾಧಾನದ ನಿಟ್ಟುಸಿರುಬಿಟ್ಟ. ಇಡೀ ಊರಿಗೇ ಉಪಯೋಗವಿಲ್ಲದ ರಸ್ತೆಯನ್ನು ತನ್ನೊಬ್ಬನ ಅಗತ್ಯ ಹಾಗೂ ತನ್ನ ವ್ಯವಹಾರ ವಿಸ್ತರಿಸಿಕೊಳ್ಳಲು ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ಷಣ್ಮುಖನನ್ನು ಹಣಿಯಲು ಇದೇ ಸರಿಯಾದ ಸಮಯವೆಂದೆಣಿಸಿದ ಬೋಬಯ್ಯನಿಗೆ ಏನನ್ನಿಸಿತೋ ಏನೋ; ತನ್ನ ಜೇಬಿನಿಂದ ಐವತ್ತು ರೂಪಾಯಿಯ ನೋಟೊಂದನ್ನು ತೆಗೆದು ಗೋಪಾಲನ ಕೈಗೆ ಹಾಕಿ ''ಎಲ್ರೂ ಸೇರಿ ನಾಗೇಸನ ಹತ್ರ ಸಾರಾಯಿ ತಗಂಡು ಕುಡೀರಿ'' ಎಂದು ಮನೆಕಡೆ ಹೊರಟ. ಒಂದ್ಹತ್ತು ಹೆಜ್ಜೆ ನಡೆದವನು ಏನೋ ನೆನಪಾದಂತೆ ವಾಪಾಸ್ ಬಂದು ಮತ್ತೆರಡು ಪ್ಯಾಕೆಟ್ ಬೋಟಿ ಕೊಂಡು ''ದಿಬ್ಬ ಹೇಳಿದ್ದು ಸರಿಯಾಗಿಯೇ ಇದೆ, ಈ ಬಾರಿ ನಿಶಾನೆ ಹೊಡಿಲೇಬೇಡಿ ಕಣ್ರಾ. ಮದ್ವಿಗೂ ಹೊಡಿಬೇಡಿ, ಸಾವಿಗೂ ಹೊಡಿಬೇಡಿ'' ಎಂದು, ಕೊಂಡಿದ್ದ ಸತೀಶ್ ಬೀಡಿಯ ಕಟ್ಟನಿಂದ ಒಂದು ಬೀಡಿ ಎಳೆದುಕೊಂಡು ಕಡ್ಡಿಗೀರಿ ಎರಡು ಆಳವಾದ ದಮ್ಮು ಎಳೆದವನೇ ಏನನ್ನೋ ದೃಢವಾಗಿ ತೀರ್ಮಾನಿಸಿದವನಂತೆ ನೆಲಗುದ್ದುವವನಂತೆ ಹೆಜ್ಜೆ ಇಡುತ್ತಾ ಮನೆಕಡೆ ಹೊರಟ. (ಮುಂದುವರೆಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248